ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಆರ್ಥಿಕ ಇಲಾಖೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 24/1/2020

## ಅನುದಾನಕ್ಕೆ ಅನುಮತಿ ಕಡ್ಡಾಯ । ಇಲಾಖೆಗಳಿಗೆ ಸರ್ಕಾರ ಷರತ್ತು

# ಮಿತವ್ಯಯಕ್ಕೆ ದೃಢ ಹೆಜ್ಜೆ

■ ರುದ್ರಣ್ಣ ಹರ್ತಿಕೋಟೆ ಬೆಂಗಳೂರು

ನಿರೀಕ್ಷಿತ ಪ್ರಮಾಣದಲ್ಲಿ ತೆರಿಗೆ ಸಂಗ್ರಹ ಸಾಧ್ಯವಾಗದ ಪರಿಣಾಮ ದಿನೇದಿನೆ ಉಲ್ಬಣಿಸುತ್ತಿರುವ ಹಣಕಾಸಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಯತ್ನವಾಗಿ ರಾಜ್ಯ ಸರ್ಕಾರ ಎಚ್ಚರಿಕೆಯ ಹೆಜ್ಜೆ ಇಡಲಾರಂಭಿಸಿದೆ. ಇದರ ಮೊದಲ ಯತ್ನವಾಗಿ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಕೆಲ ಪ್ರಮುಖ ಇಲಾಖೆಗಳಿಗೆ ಕೊನೆಯ ಕಂತಿನ ಹಣ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯ ಅನುಮತಿ ಕಡ್ಡಾಯವೆಂಬ ಷರತ್ತು ವಿಧಿಸಿದೆ.

ಮುಂದಿನ ಬಜೆಟ್‌ನಲ್ಲಿ ವಿವಿಧ ಇಲಾಖೆಗಳಿಗೆ ಅನುದಾನ ನಿಗದಿ ಸಂಬಂಧ ರಾಜ್ಯ ಸರ್ಕಾರ ಕೇಂದ್ರ ಬಜೆಟ್ ಎದುರು ನೋಡುತ್ತಿದೆ. ಸಾಲ ಮನ್ನಾ, ಪ್ರವಾಹ ಸೇರಿ ವಿವಿಧ ಕಾರಣಗಳಿಂದಾಗಿ ಹೆಚ್ಚಿನ ಹೊರೆ ಬಿದ್ದ ಪರಿಣಾಮ ಈಗಾಗಲೇ ಬಹುತೇಕ ಇಲಾಖೆಗಳಿಗೆ ಅನುದಾನ ಕಡಿತವಾಗಿದೆ. ಹಲವು ಇಲಾಖೆಗಳ ಅನುದಾನವನ್ನು ಪ್ರವಾಹದ ಪರಿಹಾರಕ್ಕೆ ತಿರುಗಿಸಿರುವುದು ವಾಸ್ತವ.


**ಅಧಿಕಾರಿಗಳ ಸಮರ್ಥನೆ:** ಸರ್ಕಾರದಲ್ಲಿ ಹಣಕಾಸಿನ ಪರಿಸ್ಥಿತಿ ಗಮನಿಸಿ ಹಣ ಬಿಡುಗಡೆ ಮಾಡಲಾಗುತ್ತದೆ. ಆದ್ದರಿಂದ ಇಂತಹ ಷರತ್ತು ವಿಧಿಸಲಾಗಿದೆ ಎಂಬುದು ಆರ್ಥಿಕ ಇಲಾಖೆ ಅಧಿಕಾರಿಗಳ ಸಮರ್ಥನೆ.

**ವಿಜಯವಾಣಿ ವಿ|ಶೇ|ಷ**

**» ಠೇವಣಿ ಇಡುವುದಕ್ಕೂ ಅನುಮತಿ ಬೇಕು**

**ಠೇವಣಿಗೂ ನಿರ್ಬಂಧ:** ಅನೇಕ ಇಲಾಖೆಗಳಲ್ಲಿ ಹಣ ವೆಚ್ಚವಾಗದೆ ಇದ್ದರೆ ಕೂಡಲೇ ಹಣವನ್ನು ಬ್ಯಾಂಕ್‌ಗಳಲ್ಲಿ ಠೇವಣಿಯನ್ನಿಟ್ಟು ಬಡ್ಡಿ ಪಡೆದರೂ ಸರ್ಕಾರಕ್ಕೆ ಪಾವತಿಸದೆ ಕಳ್ಳಗಂಟು ಮಾಡುತ್ತಿದ್ದವರಿಗೂ ಕಡಿವಾಣ ಹಾಕಲಾಗುತ್ತಿದೆ. ಬ್ಯಾಂಕ್‌ಗಳಲ್ಲಿ ಠೇವಣಿ ಅಥವಾ ವೈಯಕ್ತಿಕ ಖಾತೆಯಲ್ಲಿ ಅನುದಾನ ಇಡಬಾರದು, ಒಂದು ವೇಳೆ ಇಡುವ ಪರಿಸ್ಥಿತಿ ಎದುರಾದರೆ ಆರ್ಥಿಕ ಇಲಾಖೆ ಅನುಮತಿ ಕಡ್ಡಾಯವೆಂದು ತಿಳಿಸಲಾಗಿದೆ.

**ಯಾವುದಕ್ಕೆ ಕಡ್ಡಾಯ?:** ಕೃಷಿ ಭಾಗ್ಯ, ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ, ಮೀನುಗಾರಿಕೆ ದೋಣಿಗಳಿಗೆ ಸೀಮೆಎಣ್ಣೆ ಸಬ್ಸಿಡಿ, ಪೊಲೀಸ್ ಕಟ್ಟಡಗಳ ದುರಸ್ತಿ, ಬಸ್‌ಗಳಲ್ಲಿ ಸಿಸಿ ಕ್ಯಾಮರಾ, ಕೆರೆಗಳ ಪುನಶ್ಚೇತನ, ಅರಣ್ಯ ರಕ್ಷಣೆ, ಪ್ರಾಣಿ-ಮಾನವ ಸಂಘರ್ಷ ನಿಯಂತ್ರಣ, ಸಸಿಗಳನ್ನು ನೆಡುವುದು, ಸಮಗ್ರ ವನ್ಯಜೀವಿ ಯೋಜನೆ, ಅರಣ್ಯದ ಸುತ್ತ ರೈಲ್ವೆ ಕಂಬಿಗಳ ಬ್ಯಾರಿಕೇಡ್, ಅಲ್ಪಾವಧಿ ಸಾಲಗಳ ಮರುಪಾವತಿ, ಕನಿಷ್ಠ ಬೆಂಬಲ ಬೆಲೆ, ವಿವಿಧ ಸಮುದಾಯಗಳ ಅಭಿವೃದ್ಧಿ, ಆದಿವಾಸಿಗಳ ಅಭಿವೃದ್ಧಿ, ವಿಶ್ವಕರ್ಮ ಅಭಿವೃದ್ಧಿ ನಿಗಮ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರಾಧಿಕಾರ, ವಕ್ಫ್ ಆಸ್ತಿಗಳ ರಕ್ಷಣೆ, [illegible]




ಈ ವರ್ಷದ ಬಜೆಟ್‌ನಲ್ಲಿ ಈಗಾಗಲೇ ಬಹುತೇಕ ಎಲ್ಲ ಇಲಾಖೆಗಳಿಗೂ ಶೇ. 25 ತನಕ ಅನುದಾನ ಕಡಿತ ಮಾಡಲಾಗಿದೆ. ಮುಂದಿನ ವರ್ಷ ಸಹ ಕಡಿತವಾಗುವ ಸಾಧ್ಯತೆಗಳಿವೆ. 2020-21ರ ಬಜೆಟ್‌ನಲ್ಲಿ ಯಾವ ಇಲಾಖೆಗೆ ಎಷ್ಟು ಅನುದಾನ ಮೀಸಲಿಡಬೇಕು ಎಂಬ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾದರೆ ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ರಾಜ್ಯಗಳಿಗೆ ಎಷ್ಟು ಅನುದಾನ ಸಿಗುತ್ತದೆ ಎಂಬುದನ್ನು ಆಧರಿಸಿರುತ್ತದೆ. ಆದ್ದರಿಂದಲೇ ಕೇಂದ್ರದ ಬಜೆಟ್ ಕಡೆ ದೃಷ್ಟಿ ಹರಿಸಿದೆ.

**1,01,744**
ಕೋಟಿ ರೂ., ರಾಜ್ಯ ಸರ್ಕಾರ ಸ್ವಂತ ಸಂಪನ್ಮೂಲಗಳ ಮೂಲಕ ಸಂಗ್ರಹಿಸಬೇಕಿರುವ ಮೊತ್ತ

**66,221**
ಕೋಟಿ ರೂ., ನವೆಂಬರ್ ಅಂತ್ಯದ ತನಕ ಸಂಗ್ರಹವಾದ ತೆರಿಗೆ

**35523**
ಕೋಟಿ ರೂ., ಮಾರ್ಚ್ ಅಂತ್ಯದೊಳಗೆ ಸಂಗ್ರಹಿಸಬೇಕಿರುವ ತೆರಿಗೆ

**8900**
ಕೋಟಿ ರೂ., ಮೇಲಿನ ಗುರಿ ತಲುಪಲು ಪ್ರತಿ ತಿಂಗಳು ಸಂಗ್ರಹಿಸಬೇಕಾದ ಮೊತ್ತ

**8200**
ಕೋಟಿ ರೂ., ಸದ್ಯ ಪ್ರತಿ ತಿಂಗಳು [illegible]

## 26 ಇಲಾಖೆಗಳಿಗೆ ಅನ್ವಯ

ಕೊನೆಯ ಕಂತಿನ ಹಣ ಬಿಡುಗಡೆಗೆ ಆರ್ಥಿಕ ಇಲಾಖೆ ಅನುಮತಿ ಕಡ್ಡಾಯವೆಂದು 26 ಇಲಾಖೆಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಇದರಲ್ಲಿ ಕೆಲವು ಸಹಾಯಧನ ಆಧಾರಿತ ಯೋಜನೆಗಳು ಹಾಗೂ ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಗಳೂ ಸೇರಿವೆ. ಈ ಮೊದಲು ಆರ್ಥಿಕ ಇಲಾಖೆ ವತಿಯಿಂದ ಹಣ ಬಿಡುಗಡೆ ಮಾಡಲಾಗುತ್ತಿತ್ತಾದರೂ ಕಳೆದ ನಾಲ್ಕೈದು ವರ್ಷಗಳಿಂದ ಆಯಾ ಇಲಾಖೆಗೆ ಆರ್ಥಿಕ ಅಧಿಕಾರ ನೀಡಲಾಗಿದೆ. ಆದರೂ ಈ ರೀತಿಯ ಆದೇಶ ನೀಡಿರುವುದು ರಾಜ್ಯದ ಆರ್ಥಿಕ ಸಂಕಷ್ಟಕ್ಕೆ ಹಿಡಿದ ಕನ್ನಡಿ ಎಂದೇ ಹೇಳಲಾಗುತ್ತಿದೆ. ಆರ್ಥಿಕ ಅಧಿಕಾರ, ಪೂರಕ ಅಂದಾಜು ಏನೇ ಇದ್ದರೂ ಪರಿಷ್ಕೃತ ಮಿತಿಯಲ್ಲಿ ಹಣ ಬಿಡುಗಡೆಗೆ ಅನುಮತಿ ಪಡೆಯಲೇಬೇಕಾಗಿದೆ. ಯೋಜನೆಗೆ ಆಡಳಿತಾತ್ಮಕ ಅನುಮೋದನೆ ಹಣ ಬಿಡುಗಡೆಯ ಆದೇಶವಲ್ಲವೆಂದು ಆರ್ಥಿಕ ಇಲಾಖೆ ಸ್ಪಷ್ಟಪಡಿಸಿದೆ. ಈ ಮೊದಲು ಯಾವುದೇ ಯೋಜನೆಯಲ್ಲಿ ಮೊದಲ 3 ತ್ರೈಮಾಸಿಕಗಳಿಂದ ಶೇ. 75 ಅನುದಾನ ಬಳಕೆ ಮಾಡಿಕೊಂಡರೆ ಉಳಿದ ಶೇ.25 ಬಿಡುಗಡೆ ಮಾಡಲಾಗುತ್ತಿತ್ತು.

● ಪುಟ 5B

### ತೆರಿಗೆ ಸಂಗ್ರಹ ಬೆಳವಣಿಗೆ

| | |
|---|---|
| ಆಗಸ್ಟ್ | ಶೇ.9.33 |
| ಸೆಪ್ಟೆಂಬರ್ | ಶೇ.7.63 |
| ಅಕ್ಟೋಬರ್ | ಶೇ.5.20 |
| ನವೆಂಬರ್ | ಶೇ.4.47 |



**ಹಣಕಾಸು ಪರಿಸ್ಥಿತಿ ನೋಡಿಕೊಂಡು ಅನುದಾನ ಬಿಡುಗಡೆ ಮಾಡುತ್ತ ಹೋಗುತ್ತೇವೆ. ಆದ್ದರಿಂದ ಅನುಮತಿ ಕಡ್ಡಾಯವೆಂದು ಕೆಲವು ಇಲಾಖೆಗಳಿಗೆ ಸೂಚನೆ ನೀಡಲಾಗಿದೆ. ಯಾವ ಯೋಜನೆಗೂ ಹಣ ನಿಲ್ಲಿಸುವುದಿಲ್ಲ. ಕೇಂದ್ರದ ಬಜೆಟ್ ಅನ್ನು ಎದುರು ನೋಡುತ್ತಿದ್ದೇವೆ. ಈ ವರ್ಷ** ತೆರಿಗೆ ಸಂಗ್ರಹದ ಗುರಿ ಮುಟ್ಟುವ ನಿರೀಕ್ಷೆಯಿದೆ.